ಸದಾಶಿವಗಡ ಇದೆ. ಅದರ ಸಮೀಪವೇ ಈ ಸೈಲ್ ಕುಟುಂಬ ನೆಲೆಸಿತ್ತು. ನಲವತ್ತು ಜನರ ದೊಡ್ಡ ಕುಟುಂಬ, ಪಾಲಾಗಿ ಬೇರೆ ಒಲೆಗಳನ್ನು ಸ್ಥಾಪಿಸಿಕೊಂಡಿದ್ದರೂ ಹಬ್ಬ-ಹರಿದಿನಗಳಲ್ಲಿ, ಮದುವೆಗಳಲ್ಲಿ ಎಲ್ಲರೂ ಒಂದಾಗಿರುತ್ತಿದ್ದರು.

ಇವರ ತಂದೆ ದತ್ತ, ತಾಯಿ ಮಹಾಲಕ್ಷ್ಮಿ. ತಂದೆ ಸೈನ್ಯದಲ್ಲಿ ಸಿಪಾಯಿಯಾಗಿದ್ದರು. ಇವರು ಮಾಜಾಳಿಯಲ್ಲಿ ಹುಟ್ಟಿದ್ದು 1943ರ ಆಗಸ್ಟ್ 4ರಂದು. ಇವರದು ಮೂಲತಃ ಕೃಷಿ ಕುಟುಂಬ. ಕಾಲಕ್ರಮೇಣ ಮಿಲಿಟರಿ ಕುಟುಂಬಸ್ಥರಾದರು. ಸೈಲ್ ಮನೆತನದ ಮೂಲ ಕಾಣಕೋಣ ತಾಲ್ಲೂಕಿನ ಒಂದು ಹಳ್ಳಿ ಹಡ್ಡಕೋಣ. ಈ ಮನೆತನ ವಾಸಿಸುತ್ತಿದ್ದ ಜಾಗವನ್ನು 'ಸೈಲಾವಳ' ಎನ್ನುತ್ತಾರೆ. ಇವರ ಪೂರ್ವಜರ ಬಳಿ ಹತ್ತು- ಹನ್ನೆರಡು ಎಕರೆ ಜಮೀನು ಇತ್ತಂತೆ. ಅದೀಗ ರೈತರ ಪಾಲಾಗಿದೆ. ಸುಮಾರು 150 ವರ್ಷಗಳ ಹಿಂದೆ ಈ ಮನೆತನ ಸೈಲಾವಳ ಬಿಟ್ಟು ಮಾಜಾಳಿಗೆ ಬಂದು ನೆಲೆಸಿತು. ಈಗಲೂ ಸೈಲ ಮನೆತನದವರು ಅಲ್ಲಿದ್ದಾರೆ.

ಮಹಾಬಳೇಶ್ವರರು ಹುಟ್ಟುವ ಮೊದಲು ಸೈನ್ಯದಲ್ಲಿದ್ದ ಇವರ ತಂದೆ ಮೂರು ವರ್ಷಗಳ ಕಾಲ ಕಣ್ಮರೆಯಾಗಿದ್ದರು. ಎಲ್ಲಿದ್ದಾರೆಂದು ಯಾರಿಗೂ ಗೊತ್ತಾಗಲಿಲ್ಲ. ಆದರೆ, ಬ್ರಿಟಿಷ್ ಸರ್ಕಾರದಿಂದ ಪ್ರತಿತಿಂಗಳು ಆರು ರೂಪಾಯಿ ಬರುತ್ತಿತ್ತು. ಮಹಾಬಳೇಶ್ವರರ ತಾಯಿ ಹೆಬ್ಬೆಟ್ಟು ಒತ್ತಿ , ಅಂಚೆಯವನಿಂದ ಆ ಹಣ ಪಡೆಯುತ್ತಿದ್ದರು. ಅಂಚೆಯಿಂದ ಬರುತ್ತಿರುವುದು ಪಿಂಚಣಿ ಹಣವೆಂದೂ, ಮಹಾಬಳೇಶ್ವರನ ತಂದೆ ಯುದ್ಧದಲ್ಲಿ ಮಡಿದಿರಬಹುದೆಂದು ನೆರೆಹೊರೆಯ ಜನ ಮಾತನಾಡಿಕೊಳ್ಳುತ್ತಿದ್ದರು. ಆ ಕಾಲದಲ್ಲಿ ಅಂಚೆಯಿಂದ ಬರುವ ಆ ಹಣವೇ ದೊಡ್ಡ ಮೊತ್ತ. ಅದು ಸಂಸಾರಕ್ಕೆ ಸಾಕಾಗುತ್ತಿರಲಿಲ್ಲ. ಅದಕ್ಕೆ ಮಹಾಬಳೇಶ್ವರನ ತಾಯಿ, ಹೊಲಗದ್ದೆಗಳಲ್ಲಿ ಕೂಲಿ ಕೆಲಸ ಮಾಡಿ ಮಗನನ್ನು ನೋಡಿಕೊಳ್ಳುತ್ತಿದ್ದರು.





ಮಹಾಬಳೇಶ್ವರ ಅವರು ಪ್ರಾಥಮಿಕ ಶಿಕ್ಷಣವನ್ನು ಮಾಜಾಳಿಯಿಂದ ಮೂರು ಮೈಲಿ ದೂರದ ಸಾನ ಮುಡಗೇರಿ ಶಾಲೆಯಲ್ಲಿ ನಡೆಸಿದರು. ಏಳನೆಯ ತರಗತಿಯ ನಂತರ ಕನ್ನಡ ಬಿಟ್ಟು ಮರಾಠಿ ಮಾಧ್ಯಮದಲ್ಲಿ ಓದಬೇಕಾಯಿತು.

ಮೂರು ವರ್ಷದ ಅಜ್ಞಾತವಾಸದ ನಂತರ ಇವರ ತಂದೆ ಮರಳಿ ಮನೆಗೆ ಬಂದರು. ಅವರು ಸೇನೆಯೊಂದಿಗೆ ಜಿಬ್ರಾಲ್ಟರ್‌ನಲ್ಲಿ ಸಿಕ್ಕಿ ಬಿದ್ದಿದ್ದರು. ಮಹಾಯುದ್ಧದ ರಹಸ್ಯ ಕಾಯ್ದು ಕೊಳ್ಳಬೇಕಾದುದರಿಂದ ಅವರು ಪತ್ರವ್ಯವಹಾರ ಮಾಡುವಂತಿರಲಿಲ್ಲ. ಆಗ ಫೋನಿನ ಸೌಲಭ್ಯವಿರಲಿಲ್ಲ. ಯಾರೊಂದಿಗೂ ತನ್ನ ವಸತಿಯ ನೆಲೆ ಹೇಳುವಂತಿರಲಿಲ್ಲ. ಸೈನ್ಯದಿಂದ ಮನೆಗೆ ಬರುವಾಗ ಸೈನ್ಯಕ್ಕೆ ಸಲಾಮ್ ಹಾಕಿ ಬಂದಿದ್ದರು. ಸೈನ್ಯದಲ್ಲಿ ನಿವೃತ್ತಿ ಪಡೆದು ಬಂದ ಮಹಾಬಳೇಶ್ವರರ ತಂದೆ ತಮ್ಮದೇ ಆದ ತುಂಡು ಭೂಮಿಯಲ್ಲಿ ಕೃಷಿ ಕಾರ್ಯ ಮಾಡುತ್ತಿದ್ದರು. ಅವರಿಗೆ ಪ್ರತಿತಿಂಗಳು ನಿವೃತ್ತಿ ವೇತನ ಒಂಬತ್ತು ರೂಪಾಯಿ ಬರುತ್ತಿತ್ತು. ಮಹಾಬಳೇಶ್ವರರು ಎಂಟನೆಯ ತರಗತಿಗೆ ಬಂದ ಸ್ವಲ್ಪ ದಿನಗಳಲ್ಲಿ ಅವರು (1958) ನಿಧನರಾದರು. ಅಲ್ಲಿಗೆ ತಂದೆಯ ಪಿಂಚಣಿ ನಿಂತಿತು. ತಾಯಿಯ ಸಂಪಾದನೆ ಎರಡು ಊಟಕ್ಕೂ ಸಾಕಾಗುತ್ತಿರಲಿಲ್ಲ. ಹಾಗೂ ಹೀಗೂ ಎಂಟನೆಯ ತರಗತಿ ಮುಗಿಸಿ ಮುಂದೆ ಓದಲಾಗದೆ ಅನಿವಾರ್ಯವಾಗಿ ಶಾಲೆ ಬಿಟ್ಟು, ಕೃಷಿ ಕಾರ್ಯಕ್ಕೆ ಒಗ್ಗಿಕೊಳ್ಳಬೇಕಾಯಿತು. ಮುಂದೆ ಓದುವ ಹಂಬಲವಿದ್ದರೂ ಓದಲಾಗದೆ ಶಾಲೆ ಬಿಡಬೇಕಾಯಿತು. ಮನೆಯಲ್ಲಿ ಕೆಲವು ದನಕರುಗಳಿದ್ದವು. ಕೃಷಿಯ ಉಪಕರಣಗಳಿದ್ದವು. ಎತ್ತಿನ ಜೋಡಿಯಿತ್ತು. ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ ಮಹಾಬಳೇಶ್ವರರು ಒಕ್ಕಲುತನಕ್ಕಿಳಿದರು. ಅವರ ತಾಯಿ ಹಾಸಿಗೆ ಹಿಡಿದರು. ಮಗನ ಕಷ್ಟ ನೋಡಲಾಗದೆ, ತಾಯಿ ಅನಾರೋಗ್ಯದ ನಡುವೆಯೂ ಹೊಲಕ್ಕೆ ಬಂದು ಮಾರ್ಗದರ್ಶನ